**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**
**ಘನ ನ್ಯಾಯಾಲಯದಲ್ಲಿ**
**ಪ್ರಕರಣ ಸಂಖ್ಯೆಃ ಎಸ್.ಸಿ *6/2020***

ದಿನಾಂಕಃ ***09.01.2024***
*(ಸಾಕ್ಷಿಗೆ ಪ್ರಮಾಣ **ಮಾಡಿಸಲಾಯಿತು.**)*

ಪ್ರಾ.ಸಾಃ *5* **(ಹೆಚ್ಚುವರಿ ಸಾಕ್ಷಿ)**

ಹೆಸರು : ಡಾ. ಕೆ.ಗೋಪಾಲಕೃಷ್ಣ

ತಂದೆಯ ಹೆಸರು : ಲೇಟ್ ಕೆ.ಕೆ. ದಾಸಪ್ಪಶೆಟ್ಟಿ

ವಯಸ್ಸು : *74* ವರ್ಷ

ಉದ್ಯೋಗ : ಚೀಪ್ ಕ್ಯಾಜುಯಲಟಿ ಮೆಡಿಕಲ್ ಆಫೀಸರ್,
ರಾಜರಾಜೇಶ್ವರಿ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ, ಬೆಂಗಳೂರು

ವಾಸ ಸ್ಥಳ : **ಬೆಂಗಳೂರು**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ಕಳೆದ *14* ವರ್ಷಗಳಿಂದ ಮೇಲೆ ಹೇಳಿದ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದೇನೆ.

*2.* ದಿಃ***04.08.2019*** ರಂದು ಬೆಳಿಗ್ಗೆ ***10.25*** ನಿಮಿಷಕ್ಕೆ ಗಾಯಾಳು ಕುಮಾರ್ ಬಿನ್ ಸೇವಾ ನಾಯ್ಕ, ***42*** ವರ್ಷ, ವಾಸಃ ದೊಡ್ಡೇರಿ ಕಾಲೋನಿ, ಎಂಬುವವರನ್ನು ಅವರ ಸಂಬಂಧಿಕರಾದ ಲಕ್ಷ್ಮಣ ಎಂಬುವವರು ಬಂದೂಕಿನಿಂದ ಗುಂಡು ಹಾರಿಸಿ ಗಾಯಗೊಳಿಸಿದ್ದಾರೆ ಎಂಬ ಇತಿಹಾಸದೊಂದಿಗೆ ಕರೆದುಕೊಂಡು ಬಂದಿದ್ದು, ಗಾಯಾಳುವನ್ನು ಪರೀಕ್ಷೆ ಮಾಡಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ.

ಎ) ಎಡ ತೊಡೆ ಮುಂಭಾಗದಲ್ಲಿ ಒಂದು ದೊಡ್ಡ ಹರಿದ ಗಾಯವಾಗಿತ್ತು. *4.5* ಸೆ.ಮೀ. X *8* ಸೆ.ಮೀ. ಆಳತೆಯದಾಗಿತ್ತು. ಸದರಿ ಗಾಯದ ಅಂಚುಗಳು ಇರ್ರೆಗ್ಯುಲರ್ ಆಗಿದ್ದವು.

ಬಿ*)* ಬಲ ತೊಡೆಯ ಒಳಭಾಗದಲ್ಲಿ ವೃತ್ತಾಕಾರದ ಹರಿದ ಗಾಯವಾಗಿದ್ದು*,* ಅದರ ಅಳತೆ *3* x *3* ಸೆ*.*ಮೀ*.* *(*ಎಕ್ಸಿಟ್ ಊಂಡ್*)* ಮತ್ತು ಅದರ ಸುತ್ತಳತೆ ಕಪ್ಪು ಬಣ್ಣಕ್ಕೆ ತಿರುಗಿತ್ತು*.*

ಸಿ*)* ವೃತ್ತಾಕಾರದ ಹರಿದ ಗಾಯ *2* x *2* ಸೆ*.*ಮೀ*.* ಬಲ ತೊಡೆಯ ಹೊರಭಾಗದಲ್ಲಿ ಆಗಿದ್ದು *(*ಎಂಟ್ರಿ ಊಂಡ್*)*

ದಿಃ*04.08.2019* ರಿಂದ *04.09.2019* ರವರೆಗೆ ಚಿಕಿತ್ಸೆ ಕೊಡಲಾಗಿತ್ತು*.* ಮೇಲ್ಕಂಡ ಗಾಯಗಳು ತೀವ್ರ ಸ್ವರೂಪದಾಗಿದ್ದವು*.*

*3.* ಗಾಯಾಳುವಿಗೆ ಎಕ್ಸ್-ರೇ ತೆಗೆಸಿದ್ದು*,* ಸಿಟಿ ಸ್ಕ್ಯಾನ್ ಮಾಡಿಸಿದ್ದು ಸದರಿ ರಿಪೋರ್ಟ್ ಗಳನ್ನು ನೋಡಿದ ಮೇಲೆ ಗಾಯದ ಪ್ರಮಾಣ ಪತ್ರವನ್ನು ಕೊಟ್ಟಿರುತ್ತೇನೆ*.* ಸಾಕ್ಷಿ ಗುರುತಿಸಿದ ಗಾಯದ ಪ್ರಮಾಣ ಪತ್ರವನ್ನು ನಿಪಿ *7* ಎಂದು*,* ಸಾಕ್ಷಿಯ ಸಹಿಯನ್ನು ನಿಪಿ *7(*ಎ*)* ಎಂದು ಗುರುತಿಸಲಾಯಿತು*.*

*4.* ಬಲ ತೊಡೆಗೆ ಸಂಬಂಧಪಟ್ಟ ಎಕ್ಸ್ ರೇ ರಿಪೋರ್ಟ್ ಸಾಕ್ಷಿ ಹಾಜರು ಪಡಿಸಿದ್ದು*,* ಅದನ್ನು ನಿಪಿ *8* ಎಂದು ಮತ್ತು ಎಕ್ಸ್ ರೇ ಫಿಲ್ಮ ನ್ನು ನಿಪಿ *9* ಎಂದು ಗುರುತಿಸಲಾಯಿತು*.* ಗಾಯಾಳುವಿಗೆ ಸಂಬಂಧಪಟ್ಟ ಕೇಸ್ ಶೀಟ್ ನ್ನು ಸಾಕ್ಷಿ ಹಾಜರುಪಡಿಸಿದ್ದು ಅದನ್ನು ನಿಪಿ *10* ಎಂದು ಗುರುತಿಸಲಾಯಿತು*.*

**ಆರೋಪಿ ಪರ ವಕೀಲರು ಗೈರು ಹಾಜರಿದ್ದು, ಆರೋಪಿ ಯಾವುದೇ ಸೂಕ್ತ ಕಾರಣ ಹೇಳದೆ ಇರುವುದರಿಂದ, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರುವಿಚಾರಣೆಃ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).***

ಓ*.*ಹೇ*.*ಕೇ*.*ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ*.*

*(*ನಿಂಗಪ್ಪ ಪರಶುರಾಮ ಕೋಪರ್ಡೆ*)*
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ., ವಕೀಲರಿಂದಃ</u>**

*4.*

*5.*

**<u>ಮರುವಿಚಾರಣೆಃ ಇಲ್ಲ.</u>**

***<u>(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).</u>***

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ನಿಂಗಪ್ಪ ಪರಶುರಾಮ ಕೋಪರ್ಡೆ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

***(ಈ ಹಂತದಲ್ಲಿ ಸದರಿ ಸಾಕ್ಷಿಯು ಅಭಿಯೋಜನ ಪಕ್ಷದ ಪ್ರಕರಣಕ್ಕೆ ಅನುಗುಣವಾಗಿ ಸಾಕ್ಷ್ಯ ನುಡಿಯುತ್ತಿಲ್ಲವಾದ ಕಾರಣ ಆತನನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದರ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅಭಿಯೋಜಕರ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ.)***

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ ಃ**